**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/288/2019/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 03rd January, 2023.

# RECOMMENDATION

Sub: Departmental Inquiry against Shri S.M.Rangappa, Secretary, Hebbani Gram Panchayath, Mulbagal Taluk, Kolar District-reg.

Ref: 1) Government Order No.ಗ್ರಾಅಪ/202/ಗ್ರಾಪಂಕಾ/2019, Bengaluru, dated: 20/12/2019.

2) Nomination Order No.UPLOK-2/DE/288/2019, Bengaluru, dated: 30/12/2019 of Upalokayukta, State of Karnataka, Bengaluru.

3) Inquiry Report dated: 30/12/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 20/12/2019 initiated the disciplinary proceedings against Shri S.M.Rangappa, Secretary, Hebbani Gram Panchayath, Mulbagal Taluk, Kolar District (hereinafter referred to as Delinquent Government

Officials, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/288/ 2019, Bengaluru, dated: 30/12/2019 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri S.M.Rangappa, Secretary, Hebbani Gram Panchayath, Mulbagal Taluk, Kolar District was tried for the following charges:

**ಅನುಬಂಧ-1**

**ದೋಷಾರೋಪಣೆ**

ಆ.ಸ.ನೌ. ಶ್ರೀ ಎಸ್.ಎಂ.ರಂಗಪ್ಪ, ಕಾರ್ಯದರ್ಶಿ (ಪ್ರಸ್ತುತ ನಿವೃತ್ತ), ಹೆಬ್ಬಣಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಆದ ನೀವು, ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಹೆಬ್ಬಣಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ: 20.04.2013 ರಿಂದ 01.11.2016 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾಸ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಸರ್ಕಾರಿ ನೌಕರರಾದ ನೀವು ಬ್ಯಾಂಕ್ ಫಾಸ್ ಶೀಟ್ ಮಾತ್ರ ನೀಡಿದ್ದೀರಿ. ಅವನ್ನು ಪರಿಶೀಲಿಸಲಾಗಿ, ರೂ.49,30,973/- ಹಣ ಬಂದಿರುವುದು ಕಂಡು ಬಂದಿದೆ. ಆದರೆ ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡದೆ ಮತ್ತು ಗ್ರಾಮ ಪಂಚಾಯತ್‌ಗೆ

ಮಂಜೂರಾದ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡು ಕರ್ತವ್ಯಲೋಪ ಎಸಗಿರುತ್ತೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Not Proved' the charge leveled against DGO, Shri S.M.Rangappa, Secretary, Hebbani Gram Panchayath, Mulbagal Taluk, Kolar District.

5. On perusal of the Inquiry Report, in order to prove the guilt of DGO, the Disciplinary Authority has examined one witness i.e., PW-1 and Ex. P-1 to P-6 documents were got marked. DGO has examined himself as DW-1 and Ex. D-1 document was got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to exonerate DGO, Shri

S.M.Rangappa, Secretary, Hebbani Gram Panchayath, Mulbagal Taluk, Kolar District of the charges leveled against him.

7. Action taken in the matter shall be intimated to this Authority.

Connected records are enclosed herewith.

03/01/23

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-288/2019/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 30/12/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ಎಸ್.ಎಂ. ರಂಗಪ್ಪ** (ಪ್ರಸ್ತುತ ನಿವೃತ್ತ), ಕಾರ್ಯದರ್ಶಿ, ಹೆಬ್ಬಣಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1) ಕಂಪ್ಲೆಂಟ್/ಉಪಲೋಕ್/ಬಿಡಿ/3341/2017/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 21-02-2019.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/202/ಗ್ರಾಪಂಕಾ/2019 ಬೆಂಗಳೂರು ದಿನಾಂಕ 20-12-2019
3) ನಾಮ ನಿರ್ದೇಶನ ಸಂಖ್ಯೆ; ಉಪಲೋಕ್-2/ಡಿಇ/288/2019, ಬೆಂಗಳೂರು ದಿನಾಂಕ: 30-12-2019.

* * * * * *

ಈ ದೂರನ್ನು, ದೂರುದಾರರಾದ **ಶ್ರೀ ವಿ. ರಾಮಕೃಷ್ಣಪ್ಪ,** ಬಿನ್ ಲೇಟ್ ಆಂಜನೇಯಲು ಊದವಾರಪಲ್ಲಿ ಗ್ರಾಮ, ಪುಲಗಲ್ಲು ಅಂಚೆ, ಚೇಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ಎಸ್.ಎಂ. ರಂಗಪ್ಪ** (ಪ್ರಸ್ತುತ ನಿವೃತ್ತ), ಕಾರ್ಯದರ್ಶಿ, ಹೆಬ್ಬಣಿ ಗ್ರಾಮ ಪಂಚಾಯತ್, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಹೆಬ್ಬಣಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ 13ನೇ ಹಣಕಾಸು

ಯೋಜನೆಯಡಿಯಲ್ಲಿ ದಿನಾಂಕ 20-04-2013 ರಿಂದ 01-11-2016 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಘಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಎದುರುದಾರರು (ಆ.ಸ.ನೌ.) ಬ್ಯಾಂಕ್ ಘಾರ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ರೂ.49,30,973/- ಹಣ ಬಂದಿರುವುದು ಕಂಡುಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಎದುರುದಾರರು (ಆ.ಸ.ನೌ.) ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಹೇಳಿದ್ದಾರ. ಆದ್ದರಿಂದ, ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ:20-12-2019 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 30-12-2019 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 04-06-2020 ರಂದು ಕಳುಹಿಸಲಾಗಿರುತ್ತದೆ.

**ಅನುಬಂಧ-1**
**ದೋಷಾರೋಪಣೆ-1**

1. ಆ.ಸ.ನೌ. ಶ್ರೀ ಎಸ್.ಎಂ.ರಂಗಪ್ಪ, ಕಾರ್ಯದರ್ಶಿ (ಪ್ರಸ್ತುತ ನಿವೃತ್ತ), ಹೆಬ್ಬಣಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಆದ ನೀವು, ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಹೆಬ್ಬಣಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ: 20.04.2013 ರಿಂದ 01.11.2016 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾಸ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಸರ್ಕಾರಿ ನೌಕರರಾದ ನೀವು ಬ್ಯಾಂಕ್ ಫಾಸ್ ಶೀಟ್ ಮಾತ್ರ ನೀಡಿದ್ದೀರಿ. ಅದನ್ನು ಪರಿಶೀಲಿಸಲಾಗಿ, ರೂ.49,30,973/- ಹಣ ಬಂದಿರುವುದು ಕಂಡು ಬಂದಿದೆ. ಆದರೆ ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡದೆ ಮತ್ತು ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡು ಕರ್ತವ್ಯಲೋಪ ಎಸಗಿರುತ್ತೀರಿ.

2. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

***ಅನುಬಂಧ-2***

**ದೋಷಾರೋಪಣೆಯ ವಿವರ**

**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)**

3. ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಪುಲಗಲ್ಲು ಅಂಚೆ ಊದವಾರಪಲ್ಲಿ ಗ್ರಾಮ ನಿವಾಸಿಯಾದ ಶ್ರೀ ವಿ.ರಾಮಕೃಷ್ಣಪ್ಪ ಬಿನ್ ಲೇಟ್ ಆಂಜನೇಯಲು (ಇನ್ನು ಮುಂದೆ

ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಎಸ್.ಎಂ.ರಂಗಪ್ಪ (ಪ್ರಸ್ತುತ ನಿವೃತ್ತ), ಕಾರ್ಯದರ್ಶಿ, ಹೆಬ್ಬಣಿ ಗ್ರಾಮ ಪಂಚಾಯತ್, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

4. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕ್ ಹೆಬ್ಬಣಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ:20/04/13 ರಿಂದ 01/11/16 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾಸ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಆ.ಸ.ನೌಕರರು ಬ್ಯಾಂಕ್ ಫಾಸ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ರೂ.49,30,973/- ಹಣ ಬಂದಿರುವುದು ಕಂಡು ಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಆ.ಸ.ನೌಕರರು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆಯೆಂದು ಹೇಳಿದ್ದಾರೆ.

5. **ದೂರಿಗೆ ಆ.ಸ.ನೌಕರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ -**

ತಾವು ದಿನಾಂಕ:21/06/14ರಂದು ಹೆಬ್ಬಣಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ ಗ್ರೇಡ್-1ರ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಂಡಿರುವುದಾಗಿ ಹೇಳಿ, ದೂರುದಾರರು ಸಲ್ಲಿಸಿದ ಅರ್ಜಿಯಲ್ಲಿ ಬ್ಯಾಂಕ್ ಫಾರ್ ಶೀಟ್‌ನ ಪ್ರತಿಯನ್ನು ಮಾತ್ರ ನೀಡಿದ್ದಾರೆನ್ನುವುದು ಸತ್ಯಕ್ಕೆ ದೂರವಾಗಿದೆ. ದೂರುದಾರರು ಸಲ್ಲಿಸಿದ ಅರ್ಜಿಯಲ್ಲಿ ದಿನಾಂಕ:01/01/13 ರಿಂದ 30/10/14 ರವರೆಗಿನ 13ನೇ ಹಣಕಾಸು ಯೋಜನೆಯಡಿಯ ಕ್ರಿಯಾ ಯೋಜನೆ, ಬ್ಯಾಂಕ್ ಫಾಸ್ ಶೀಟ್, ನಗದು ವಹಿಯ ಪ್ರತಿ ಹಾಗೂ ಖರ್ಚಿನ ಬಾಬ್ತು ಬಿಲ್ಲುಗಳ ಪ್ರತಿಗಳನ್ನು ಕೇಳಿದ್ದು, ಅವರಿಗೆ ಆ ಅವಧಿಯ ಬ್ಯಾಂಕ್ ಫಾಸ್ ಶೀಟ್ ಹಾಗೂ ನಗದು ವಹಿಯ ನಕಲುಗಳನ್ನು ಮಾಹಿತಿಯನ್ನು ದಿ:15/11/17ರಂದು ನೋಂದಾಯಿತ ಅಂಚೆ ಮೂಲಕ ಕಳುಹಿಸಿದೆ. ಆದರೆ, ಮಾಹಿತಿ ಕೇಳಿದ ದಿನಾಂಕಗಳನ್ನು ದೂರಿನಲ್ಲಿ ಅವರು ತಪ್ಪಾಗಿ ಹೇಳಿದ್ದಾರೆ. ದಿನಾಂಕ:01/01/13 ರಿಂದ 30/10/14ರವರೆಗಿನ ಅವಧಿಯಲ್ಲಿ ಸರ್ಕಾರದಿಂದ ರೂ.39,17,041/- ಅನುದಾನ ಬಂದಿದ್ದು, ಸದರಿ ಅವಧಿಯಲ್ಲಿ ರೂ.36,54,598/- ವೆಚ್ಚವಾಗಿದೆಯೆಂದು ಹೇಳಿದ್ದಾರೆ.

6. **ಆ.ಸ.ನೌಕರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –**

ಬ್ಯಾಂಕ್ ಪಾಸ್ ಬುಕ್ ಮತ್ತು ನಗದು ಪುಸ್ತಕದ ನಕಲುಗಳನ್ನು ದಿ:15/11/17ರಂದು ನೋಂದಾಯಿತ ಅಂಚೆ ಮೂಲಕ ತಮಗೆ ಕಳುಹಿಸಿದೆಯೆಂದು ಆ.ಸ.ನೌಕರರು ಸುಳ್ಳು ಮಾಹಿತಿಯನ್ನು ನೀಡಿದ್ದಾರೆ. ಬ್ಯಾಂಕ್ ಪಾಸ್ ಶೀಟ್‌ನ ಪ್ರಕಾರ ರೂ.40,33,962/– ಜಮಾ ಆಗಿದ್ದು, ಆದರೆ ಅಷ್ಟು ಮೊತ್ತಕ್ಕೆ ವೋಚರ್ ಇಲ್ಲ. ರೂ.27,10,970/–ಗಳಿಗೆ ಮಾತ್ರ ವೋಚರ್ ಇದೆ. ದೂರು ನೀಡಿದ ನಂತರ ಕೆಲವು ವೋಚರ್‌ಗಳನ್ನು ಸೃಷ್ಟಿ ಮಾಡಿದ್ದಾರೆ. ಪ್ರತಿಯೊಂದು ಕಾಮಗಾರಿಗೆ ಕ್ರಿಯಾ ಯೋಜನೆ ಹಾಗೂ ಅಂದಾಜು ದರಪಟ್ಟಿ ಮಾಡಿಲ್ಲ. ಸಾಮಗ್ರಿಗಳನ್ನು ಕೆಟಿಪಿಪಿ ನಿಯಮಗಳನ್ವಯ ಖರೀದಿಸಿಲ್ಲ. ಒಂದೇ ಮಳಿಗೆಯಲ್ಲಿ ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರಕ್ಕೆ ಸಾಮಗ್ರಿಗಳನ್ನು ಖರೀದಿಸಿ ಇಲಾಖೆಗೆ ವಂಚನೆ ಮಾಡಿದ್ದಾರೆ, ವೋಚರ್‌ಗಳಲ್ಲಿ ಲೋಪದೋಷಗಳಿವೆ, ಅವುಗಳಲ್ಲಿ ಕ್ರಮ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸಿಲ್ಲ, ಮಳಿಗೆಯ ಮಾಲೀಕರಿಂದ ಕಮಿಷನ್ ಹಣ ಪಡೆದು ದುಪ್ಪಟ್ಟು ಬೆಲೆಗೆ ಸಾಮಗ್ರಿಗಳನ್ನು ಖರೀದಿಸಿದ್ದು, ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸಬೇಕೆಂದು ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಮುಳಬಾಗಿಲು ತಾಲ್ಲೂಕ್ ಹೆಬ್ಬಣಿ ಗ್ರಾಮ ಪಂಚಾಯತ್‌ಗೆ 13ನೇ ಹಣಕಾಸು ಯೋಜನೆ ಅಡಿ ಸರ್ಕಾರದ ಅನುದಾನವು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ಹೆಬ್ಬಣಿ ಶಾಖೆಯಲ್ಲಿರುವ ಖಾತೆ ಸಂಖ್ಯೆ:10638100007077ಗೆ ಜಮಾ ಆಗಿರುವುದು ಲೆಕ್ಕ ತಃಖ್ತೆಯಲ್ಲಿ (ಏಪ್ರಿಲ್, 2013 ರಿಂದ ಅಕ್ಟೋಬರ್, 2017ರವರೆಗೆ) ಕಂಡು ಬಂದಿದೆ. ಸದರಿ ಅವಧಿಯಲ್ಲಿ ಸದರಿ ಖಾತೆಗೆ 13ನೇ ಹಣಕಾಸು ಯೋಜನೆ ಅಡಿ ಜಮಾ ಆದ ಹಣದ ವಿವರ ಈ ಕೆಳಗಿನಂತಿದೆ –

| ಕ್ರ. ಸಂ. | ದಿನಾಂಕ | ಮೊತ್ತ ರೂ.ಗಳಲ್ಲಿ |
|---|---|---|
| 1 | 06/07/2013 | 3,06,288.00 |
| 2 | 25/07/2013 | 5,26,734.00 |
| 3 | 06/01/2014 | 3,94,346.00 |
| 4 | 28/01/2014 | 5,000.00 |
| 5 | 19/04/2014 | 6,89,467.00 |
| 6 | 20/05/2014 | 5,53,309.00 |
| 7 | 22/05/2014 | 2,898.00 |
| 8 | 19/08/2014 | 5,65,461.00 |
| 9 | 20/01/2015 | 2,231.00 |
| 10 | 10/07/2015 | 2,75,123.00 |
| ಒಟ್ಟು ಮೊತ್ತ | | 33,20,857.00 |

2) ಸದರಿ ಖಾತೆಯಲ್ಲಿರುವ ಹಣವನ್ನು ಖಾಸಗಿ ವ್ಯಕ್ತಿ ಮತ್ತು ಸಂಸ್ಥೆಯ ಹೆಸರಿನಲ್ಲಿ ನೀಡಿರುವ ಚೆಕ್‌ಗಳ ಮುಖೇನ ವ್ಯಯಿಸಿರುವುದು ಕಂಡು ಬಂದಿದೆ;

3) 13ನೇ ಹಣಕಾಸು ಯೋಜನೆ ಅಡಿಯಲ್ಲಿ ಹಮ್ಮಿಕೊಂಡ ಕಾಮಗಾರಿಗಳ ಕ್ರಿಯಾ ಯೋಜನೆ, ಬ್ಯಾಂಕ್ ಪಾಸ್ ಶೀಟ್ ಮತ್ತು ನಗದು ಪುಸ್ತಕದ ಪ್ರತಿಗಳನ್ವಯ ಜನವರಿ, 2013 ರಿಂದ ಅಕ್ಟೋಬರ್, 2014ರವರೆಗಿನ ನಗದು ವಹಿಯನ್ವಯ ವಿವಿಧ ಕಾಮಗಾರಿಗಳಿಗೆ ಈ ಕೆಳಗಿನ ಖರ್ಚುಗಳನ್ನು ಮಾಡಿರುವುದು ಕಂಡು ಬಂದಿದೆ –

| ಕ್ರಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ರೂ. ಗಳಲ್ಲಿ |
|---|---|---|---|
| 1 | 678381 | 10/04/2013 | 4745.00 |
| 2 | 678382 | | 3765.00 |
| 3 | 678383 | | 5745.00 |
| 4 | 678384 | | 11500.00 |
| 5 | 678385 | | 9815.00 |
| 6 | 678386 | | 6300.00 |
| 7 | 678387 | | 4215.00 |
| 8 | 678388 | | 3165.00 |
| 9 | 678389 | | 10060.00 |
| 10 | 678390 | | 5005.00 |
| 11 | 678391 | | 12180.00 |
| 12 | 678392 | | 21325.00 |
| 13 | 678393 | 14/04/2013 | 17600.00 |
| 14 | 678394 | | 5877.00 |
| 15 | 678395 | | 16000.00 |
| 16 | 678396 | | 12585.00 |
| 17 | 678397 | 17/06/2013 | 8190.00 |
| 18 | 678398 | | 6773.00 |
| 19 | 678399 | | 15864.00 |
| 20 | 678400 | | 3300.00 |
| 21 | 679551 | 18/06/2013 | 10210.00 |
| 22 | 679552 | 18/06/2013 | 2500.00 |
| 23 | 679553 | | 2950.00 |
| 24 | 679554 | | 49562.00 |
| 25 | 679558 | | **142183.00** |
| 26 | 679559 | 25/07/2013 | 10464.00 |
| 27 | 679560 | 29/07/2013 | 49962.00 |
| 28 | 679561 | 01/08/2013 | 11690.00 |
| 29 | 679562 | | 10160.00 |
| 30 | 679563 | | 19260.00 |
| 31 | 679564 | | 12190.00 |

| | | | |
|---|---|---|---|
| 32 | 679565 | | 16940.00 |
| 33 | 679566 | | 16380.00 |
| 34 | 679567 | | 11881.00 |
| 35 | 679568 | 05/08/2013 | 15347.00 |
| 36 | 679569 | | 29400.00 |
| 37 | 679570 | | 4600.00 |
| 38 | 679571 | 09/08/2013 | 17000.00 |
| 39 | 679572 | | 14000.00 |
| 40 | 679573 | 02/09/2013 | 7355.00 |
| 41 | 679575 | | 14000.00 |
| 42 | 679953 | 10/09/2013 | 8930.00 |
| 43 | 679954 | 12/09/2013 | 10010.00 |
| 44 | 679955 | | 8345.00 |
| 45 | 679956 | 01/10/2013 | 5615.00 |
| 46 | 679957 | | 13400.00 |
| 47 | 679958 | | 11470.00 |
| 48 | 679959 | 08/10/2013 | 2710.00 |
| 49 | 679961 | | 14000.00 |
| 50 | 679962 | | 17923.00 |
| 51 | 679963 | 20/10/2013 | 2295.00 |
| 52 | 679964 | | 37774.00 |
| 53 | 679966 | | 8830.00 |
| 54 | 679967 | | 4700.00 |
| 55 | 679968 | | 4350.00 |
| 56 | 679969 | 19/11/2013 | 7860.00 |
| 57 | 679970 | 22/11/2013 | 6300.00 |
| 58 | 679971 | 29/11/2013 | 13043.00 |
| 59 | 679974 | | 10150.00 |
| 60 | 679973 | 05/12/2013 | 3750.00 |
| 61 | 679972 | 07/12/2013 | 8450.00 |
| 62 | 679975 | | 20400.00 |
| 63 | 679326 | | 4935.00 |
| 64 | 679329 | 12/12/2013 | 8305.00 |
| 65 | 679328 | 14/12/2013 | 14452.00 |
| 66 | 679327 | 17/12/2013 | 17850.00 |
| 67 | 679330 | | 2750.00 |
| 68 | 679333 | 02/01/14 | 25800.00 |
| 69 | 679332 | | 9600.00 |
| 70 | 679334 | | 4395.00 |

| | | | |
|---|---|---|---|
| 71 | 679342 | 23/01/14 | 57000.00 |
| 72 | 679331 | 24/01/14 | 5653.00 |
| 73 | 679339 | | 2150.00 |
| 74 | 679336 | | 18200.00 |
| 75 | 679338 | | 16190.00 |
| 76 | 679340 | 27/01/14 | 12930.00 |
| 77 | 679341 | 30/01/14 | 6300.00 |
| 78 | 679343 | 06/02/14 | 13000.00 |
| 79 | 679344 | 13/02/14 | 2411.00 |
| 80 | 679345 | 20/02/14 | **137975.00** |
| 81 | 679348 | 25/02/14 | 3921.00 |
| 82 | 679346 | 25/02/14 | 32435.00 |
| 83 | 679347 | | 16780.00 |
| 84 | 679349 | 04/03/14 | 21390.00 |
| 85 | 679350 | 13/03/14 | 3675.00 |
| 86 | 4701 | 06/03/14 | 17781.00 |
| 87 | 4708 | 17/03/14 | 5960.00 |
| 88 | 4707 | | 8350.00 |
| 89 | 4702 | 20/03/14 | 15560.00 |
| 90 | 4710 | 21/03/14 | **188000.00** |
| 91 | 679335 | 24/03/14 | 3150.00 |
| 92 | 679337 | | 3365.00 |
| 93 | 4706 | 27/03/14 | 17526.00 |
| 94 | 4711 | 29/03/14 | 25250.00 |
| 95 | 4716 | 24/04/14 | 9148.00 |
| 96 | 4715 | 25/04/14 | 17500.00 |
| 97 | 4717 | | 17500.00 |
| 98 | 4718 | 29/04/14 | 3260.00 |
| 99 | 4703 | | 25283.00 |
| 100 | 4704 | | 21073.00 |
| 101 | 4705 | | 22516.00 |
| 102 | 4712 | 15/05/14 | 2620.00 |
| 103 | 4721 | | 6350.00 |
| 104 | 4719 | | 17390.00 |
| 105 | 4720 | 16/05/14 | 2200.00 |
| 106 | 4722 | | 6250.00 |
| 107 | 4726 | 24/05/14 | 8665.00 |
| 108 | 4727 | 26/05/14 | 19185.00 |
| 109 | 4731 | | 8997.00 |

| | | | |
|---|---|---|---|
| 110 | 4730 | | 21380.00 |
| 111 | 4732 | | 17499.00 |
| 112 | 4633 | | 28114.00 |

| | | | |
|---|---|---|---|
| 113 | 4728 | 02/06/2014 | 4445.00 |
| 114 | 4735 | | 37458.00 |
| 115 | 4736 | | 9102.00 |
| 116 | 4729 | 03/06/2014 | 10775.00 |
| 117 | 4724 | 04/06/2014 | 9714.00 |
| 118 | 4725 | 09/06/2014 | 9240.00 |
| 119 | 4734 | | 46250.00 |
| 120 | 4737 | 12/06/2014 | 19650.00 |
| 121 | 4739 | 27/06/2014 | 23250.00 |
| 122 | 4738 | | 21150.00 |
| 123 | 4742 | 30/06/2014 | 32000.00 |
| 124 | 4741 | | 26000.00 |
| 125 | 4743 | | 15000.00 |
| 126 | 4740 | | 31000.00 |
| 127 | 4746 | 08/07/2014 | 4200.00 |
| 128 | 0054 | | 9968.00 |
| 129 | 4744 | 10/07/2014 | 5275.00 |
| 130 | 4747 | 11/07/2014 | 3400.00 |
| 131 | 0052 | 15/07/2014 | 17275.00 |
| 132 | 0062 | | 4495.00 |
| 133 | 4749 | | 3300.00 |
| 134 | 4750 | | 5500.00 |
| 135 | 0064 | 17/07/2014 | 3665.00 |
| 136 | 4745 | | 3885.00 |
| 137 | 0061 | | 10120.00 |
| 138 | 0056 | | 22500.00 |
| 139 | 0053 | | 14665.00 |
| 140 | 0065 | | **101000.00** |
| 141 | 4748 | 21/07/2014 | 9230.00 |
| 142 | 0063 | 25/07/2014 | 925.00 |
| 143 | 4723 | 26/07/2014 | 6250.00 |
| 144 | 4766 | 31/07/2014 | 12500.00 |
| 145 | 4768 | | 11450.00 |
| 146 | 0070 | 05/08/2014 | 11289.00 |
| 147 | 0069 | | 33802.00 |

| | | | |
|---|---|---|---|
| 148 | 0055 | 06/08/2014 | **106744.00** |
| 149 | 0067 | 07/08/2014 | 10385.00 |
| 150 | 0060 | | 4960.00 |
| 151 | 0057 | 11/08/2014 | 15750.00 |
| 152 | 0071 | 23/08/2014 | 3934.00 |
| 153 | 0073 | | 37260.00 |
| 154 | 0074 | 28/08/2014 | 24100.00 |
| 155 | 0076 | 02/09/2014 | 19200.00 |
| 156 | 0075 | 05/09/2014 | 8450.00 |
| 157 | 0077 | 16/09/2014 | 8730.00 |
| 158 | 0083 | | 14150.00 |
| 159 | 0078 | 18/09/2014 | 9007.00 |
| 160 | 0082 | 23/09/2014 | 2550.00 |
| 161 | 0085 | 25/09/2014 | 3000.00 |
| 162 | 0081 | | 7100.00 |
| 163 | 0080 | 27/09/2014 | 4200.00 |
| 164 | 0079 | 29/09/2014 | 3600.00 |
| 165 | 0086 | 09/10/2014 | 10050.00 |
| 166 | 0088 | 16/10/2014 | 9750.00 |
| 167 | 0087 | | 5005.00 |
| 168 | 0093 | 21/10/2014 | 24765.00 |
| 169 | 0092 | | 24690.00 |
| 170 | 0094 | | 7570.00 |
| 171 | 0091 | | 10500.00 |
| 172 | 0099 | | 20000.00 |
| 173 | 0090 | | 1310.00 |
| 174 | 0089 | | 7115.00 |
| 175 | 0096 | | 8830 |
| 176 | 0087 | | 9700.00 |
| 177 | 0095 | | 5000.00 |
| 178 | 0100 | | 19860.00 |
| | | **ಒಟ್ಟು ಮೊತ್ತ** | **28,28,000.00** |

8) ಜನವರಿ, 2013 ರಿಂದ ಅಕ್ಟೋಬರ್, 2014ರ ಅವಧಿಯಲ್ಲಿ ಮುಳಬಾಗಿಲು ತಾಲ್ಲೂಕ್ ಹೆಬ್ಬಣಿ ಗ್ರಾಮ ಪಂಚಾಯತ್‌ನಲ್ಲಿ ಅನುಷ್ಠಾನಗೊಂಡ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಖರ್ಚು ಮಾಡಲಾಗಿದೆಯೆಂದು ಹೇಳಲಾದ ಒಟ್ಟು ಮೊತ್ತ ರೂ.28,28,000/- ಎಂದು ಕಂಡು ಬಂದಿದ್ದು, ಸದರಿ ಖರ್ಚುಗಳ ಪೈಕಿ 5 ಖರ್ಚುಗಳು (ದೋಷಾರೋಪಣಾ ವಿವರದಲ್ಲಿರುವ ನಗದುವಹಿ ಕ್ರಮ ಸಂಖ್ಯೆ:25, 80, 90, 140 ಮತ್ತು 148) ರೂಪಾಯಿ ಒಂದು ಲಕ್ಷ ಮೀರಿದ್ದಾಗಿದ್ದು, ಸದರಿ ಕ್ರಮ

ಸಂಖ್ಯೆ:25, 80, 90 ಮತ್ತು 140 ಖರ್ಚಿಗೆ ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಕರೆದ ದಾಖಲೆಗಳಿಲ್ಲ. ಟೆಂಡರ್ ಕರೆಯದೇ, ಸದರಿ ಕಾಮಗಾರಿಗಳನ್ನು (ಕಾಮಗಾರಿಗಳ ಹೆಸರು – ಪಂಚಾಯತ್ ಪಶ್ಚಿಮ ಕಟ್ಟಡಕ್ಕೆ ಮತ್ತು ಸಿಂಟೆಕ್ಸ್ ಟ್ಯಾಂಕ್ ಕೂರಿಸಲು ಛಾವಣಿ ನಿರ್ಮಾಣ) ಶ್ರೀ.ರಾಜಣ್ಣ ರವರಿಗೆ ವಹಿಸಿರುವುದು ಕಂಡು ಬಂದಿದ್ದು, ಸಿಂಟೆಕ್ಸ್ ಟ್ಯಾಂಕ್ ಕೂರಿಸುವ ಕಾಮಗಾರಿಯ ಕರಾರಿನಲ್ಲಿ ಕರಾರಿನ ಸಂಖ್ಯೆಯಾಗಲೀ ಅಥವಾ ದಿನಾಂಕವಾಗಲೀ ನಮೂದಾಗಿಲ್ಲ. ಪಂಚಾಯತ್‌ನ ಪಶ್ಚಿಮ ಭಾಗದ ಕಟ್ಟಡಕ್ಕೆ ಸಂಬಂಧಿಸಿದಂತೆ, ಸದರಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿದ ಬಗ್ಗೆ ದಾಖಲೆಗಳಿಲ್ಲ. ಉಳಿದಂತೆ, ಕ್ರಮ ಸಂಖ್ಯೆ:148ರಲ್ಲಿನ ಖರ್ಚಿನ ಬಾಬ್ತು ರೂ.1,06,744/-ಗಳಿಗೆ ಚೆಕ್ ಅನ್ನು 'ಕಾರ್ಮಿಕ ಅಧಿಕಾರಿ' ಹೆಸರಿನಲ್ಲಿ ನೀಡಿರುವುದು ಮತ್ತು ಸದರಿ ಮೊತ್ತವನ್ನು ಮುಳಬಾಗಿಲು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಕಾರ್ಮಿಕ ಅಧಿಕಾರಿ ಹಾಗೂ ಕನಿಷ್ಠ ವೇತನ ಪ್ರಾಧಿಕಾರಿ ರವರು ಸಲ್ಲಿಸಿದ ಕ್ರಿ.ಮಿಸ್.ನಂ.181/2013 ಪ್ರಕರಣಕ್ಕೆ ಸಂಬಂಧಿಸಿದಂತೆ ಪಾವತಿಸಿರುವುದು ಕಂಡು ಬಂದಿದೆ. ಒಂದು ಉದ್ದೇಶಕ್ಕೆ ಮೀಸಲಿರಿಸಿದ ಹಣವನ್ನು ನಿಯಮ ಬಾಹಿರವಾಗಿ ಬೇರೆ ಯಾವುದೋ ಉದ್ದೇಶಕ್ಕೆ ಬಳಸಿರುವುದು ಕಂಡು ಬಂದಿದೆ. ಕಾರಣ, ಸದರಿ ಕ್ರಮ ಸಂಖ್ಯೆ:25, 80, 90, 140 ಮತ್ತು 148 ಒಟ್ಟು ರೂ.**6,75,902/-ಗಳು** ದುರುಪಯೋಗ ಆಗಿದೆ;

9) ಉಳಿದಂತೆ ಕ್ರಮ ಸಂಖ್ಯೆ-1 ರಿಂದ 24, 26 ರಿಂದ 79, 81 ರಿಂದ 89, 91 ರಿಂದ 139, 141 ರಿಂದ 147 ಮತ್ತು 149 ರಿಂದ 178ರ ಖರ್ಚುಗಳು ಒಂದು ಲಕ್ಷಕ್ಕಿಂತ ಕಡಿಮೆ ಇದ್ದು, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಖರೀದಿ ಬಿಲ್ಲು \ ನಗದು ಬಿಲ್ಲಿನ ಪ್ರತಿಗಳನ್ನು ಮಾತ್ರವಿದೆ. ಸದರಿ ಖರೀದಿಗಳಿಗೆ ಸಂಬಂಧಿಸಿದಂತೆ, ದರಪಟ್ಟಿಗಳನ್ನು ಆಹ್ವಾನಿಸಿದ ಬಗ್ಗೆ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55 (49)(ಎ)ರನ್ವಯ ರೂ.5,000/- ಮೀರಿದ ರೂ.1,00,000/-ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಆ.ಸ.ನೌ. ಹಾಜರುಪಡಿಸಿದ ಬಹುತೇಕ ಬಿಲ್ಲುಗಳು ಸಂಸ್ಥೆಯ ಹೆಸರಿನಲ್ಲಿದ್ದು, ಆದರೆ ಸದರಿ ಬಿಲ್ಲುಗಳಿಗೆ ಸಂಬಂಧಿಸಿದ ಹಣದ ಚೆಕ್‌ಗಳನ್ನು ಅದೇ ಸಂಸ್ಥೆಯ ಹೆಸರಿನಲ್ಲಿ ನೀಡದೇ, ಬೇರೆ ಸಂಸ್ಥೆ \ ವ್ಯಕ್ತಿಗಳ ಹೆಸರಿನಲ್ಲಿ ನೀಡಿರುವುದು ಕಂಡು ಬಂದಿದೆ (ಉದಾ: ಚೆಕ್ ಸಂಖ್ಯೆ:679573 ದಿ:02/09/2013 ರೂ.7355/-, ಚೆಕ್ ಸಂಖ್ಯೆ:679333 ದಿ:02/01/2014 ರೂ.25,800/-, ಚೆಕ್ ಸಂಖ್ಯೆ:4705 ದಿ:24/02/2014 ರೂ.22,516/-). ಆದ್ದರಿಂದ, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ, ಕೆಎಫ್‌ಸಿ ನಿಯಮಾವಳಿಗಳ ಉಲ್ಲಂಘನೆಯಾಗಿದೆ. ಕಾರಣ, ಸದರಿ ಒಟ್ಟು ಖರ್ಚು ರೂ.**21,52,098**/-ಗಳು ದುರುಪಯೋಗ ಆಗಿದೆ. ಈ ಬಗ್ಗೆ ಆ.ಸ.ನೌಕರರು ಯಾವುದೇ ಸ್ಪಷ್ಟನೆಯನ್ನು ನೀಡಿಲ್ಲ;

10) ಆ.ಸ.ನೌಕರರ ಸೇವಾ ವಿವರದ ಪ್ರಕಾರ ಅವರು ಹೆಬ್ಬಣ್ಣಿ ಗ್ರಾಮ ಪಂಚಾಯತ್‌ನ ಗ್ರೇಡ್-1 ಕಾರ್ಯದರ್ಶಿಯಾಗಿದ್ದು, ದಿನಾಂಕ:21/06/14 ರಿಂದ ಈವರೆವಿಗೂ ಹೆಬ್ಬಣ್ಣಿ ಗ್ರಾಮ ಪಂಚಾಯತ್‌ನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಮೇಲೆ ಹೇಳಿದ ಎಲ್ಲಾ ಅಂಶಗಳನ್ವಯ ಆ.ಸ.ನೌಕರರು ಹೆಬ್ಬಣ್ಣಿ ಗ್ರಾಮ ಪಂಚಾಯತ್‌ಗೆ 13ನೇ ಹಣಕಾಸು ಯೋಜನೆ ಅಡಿ

ಸರ್ಕಾರದಿಂದ ಬಂದ ಅನುದಾನದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

11) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಆ.ಸ.ನೌಕರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆ.ಸ.ನೌಕರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13) ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) ರನ್ವಯ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಆ.ಸ.ನೌಕರರು 31/05/2018 ರಂದು ನಿವೃತ್ತಿ ಹೊಂದಿರುವುದರಿಂದ, ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(i) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಂಡು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಸದರಿ ಶಿಫಾರಸ್ಸಿನ ಮೇರೆಗೆ ಸರ್ಕಾರವು ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ-2 ರವರಿಗೆ ವಹಿಸಿ ಆದೇಶ ಮಾಡಿದೆ.

ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 13-10-2020 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಾನು 2012 ರಿಂದ 2018 ರವರೆಗೆ ಗ್ರೇಡ್–1 ಕಾರ್ಯದರ್ಶಿಯಾಗಿ ಹೆಬ್ಬುಣಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಆ ಸಮಯದಲ್ಲಿ ಶ್ರೀ ಕೆ.ಸಿ. ಬಾಲಾಜಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು 2012 ರಿಂದ 2017 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ ಅಂತ ಹೇಳಿರುತ್ತಾರೆ. ಮುಂದುವರಿದು, ದೂರುದಾರರು ನಮೂನೆ–1 ರಲ್ಲಿ ಮಾಹಿತಿ ಹಕ್ಕು ಅಧಿನಿಯಮದಲ್ಲಿ 13ನೇ ಹಣಕಾಸು ಯೋಜನೆಯಲ್ಲಿ ವೆಚ್ಚ ಮಾಡಿರುವ ಬಗ್ಗೆ ಮಾಹಿತಿಯನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದು, ತನ್ನ ಅವಧಿಯ ನಂತರ ನಿಯೋಜಿಸಿರುವ ಅಧಿಕಾರಿಗಳು ದೂರುದಾರರ ಮನವಿಯನ್ನು ಪರಿಶೀಲಿಸಿ, ಈ ಬಗ್ಗೆ ದೂರುದಾರರು ನಿಯಮ ಬಾಹಿರವಾಗಿ ಅಗತ್ಯಕ್ಕಿಂತ ಹೆಚ್ಚು ಮಾಹಿತಿಯನ್ನು ಪಡೆಯಲು ನಮೂನೆ–1 ನ್ನು ಸಲ್ಲಿಸಿದ್ದರು. ಆದಕಾರಣ, ಕರ್ತವ್ಯದಲ್ಲಿ ಇದ್ದ ಅಧಿಕಾರಿಗಳು ದೂರುದಾರರಿಗೆ ಹಿಂಬರಹ ನೀಡದೇ ಲಭ್ಯ ಮಾಹಿತಿಯನ್ನು ನಿಗದಿತ ಮಿತಿಯಲ್ಲಿ ನೊಂದಾಯಿತ ಅಂಚೆ ಮೂಲಕ ನೀಡಿರುತ್ತಾರೆ ಹಾಗೂ ತಾನು ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದು ಹೇಳಿರುತ್ತಾರೆ.

7. ಮುಂದುವರಿದು, ದಿನಾಂಕ 15–11–2017 ರಂದು ದೂರುದಾರರಿಗೆ ಮಾಹಿತಿಯನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿರುತ್ತೇನೆ ಅಂತ ಹೇಳಿರುತ್ತಾರೆ. 2013–14ನೇ ಸಾಲಿನ ಸ್ಥಳೀಯ ಲೆಕ್ಕ ಪರಿಶೋಧನಾ ಸಾಮಾನ್ಯ ಮಾಹಿತಿ ದಾಖಲೆಯನ್ನು ಸಲ್ಲಿಸಿದ್ದು, ಸದರಿ ದಾಖಲೆಯಲ್ಲಿ ಶ್ರೀ ಕೆ.ಸಿ. ಬಾಲಾಜಿ ಇವರು ದಿನಾಂಕ 01–04–2013 ರಿಂದ 31–03–2014 ರವರೆಗೆ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ ಅಂತ ತಿಳಿಸಿರುತ್ತಾರೆ.

8. ಮುಂದುವರಿದು, ಸದರಿ ಗ್ರಾಮ ಪಂಚಯಿತಿಯಲ್ಲಿ ಮೂಲಭೂತ ಸೌಕರ್ಯಗಳ ಅನುಷ್ಠಾನಕ್ಕಾಗಿ 1) ನೀರು ಸರಬರಾಜಿನ ಘಟಕಗಳ ನಿರ್ವಹಣೆ, 2) ನೀರು ಸರಬರಾಜಿನ ಪೈಪ್‌ಲೈನ್, 3)

ಮೋಟಾರು ಮತ್ತು ಪಂಪುಗಳ ರಿಪೇರಿ, 4) 13ನೇ ಹಣಕಾಸಿನ ಕ್ರಿಯಾ ಯೋಜನೆಯ ಅನುಮೋದಿತ ಕಾಮಗಾರಿಗಳ ನಿರ್ವಹಣೆ, 5) ನರೇಗಾ ಯೋಜನೆಯ ಕಾಮಗಾರಿಗಳ ಅನುಷ್ಠಾನ, 6) ಗ್ರಾಮ ಪಂಚಾಯತ್ ಖಾತೆ 1 ರ ಸಾದಿಲ್ವಾರು ವೆಚ್ಚಗಳು, 7) ಬೀದಿ ದೀಪಗಳ ನಿರ್ವಹಣೆ ಮತ್ತು ವೈಯಕ್ತಿಕ ಫಲಾನುಭವಿಗಳ ಶೌಚಾಲಯ, 8) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ಕಲ್ಯಾಣ, 9) ವಸತಿ ಯೋಜನೆಗಳ ಕಾರ್ಯಕ್ರಮಗಳ ನಿಯಮಾನುಸಾರ ಅನುಷ್ಠಾನಗೊಂಡಿರುತ್ತದೆ ಅಂತ ಹೇಳಿರುತ್ತಾರೆ. ಕರ್ನಾಟಕ ಪಾರದರ್ಶಕ ಕಾಯ್ದೆ 1999-2000 ನಿಯಮ 3ರಲ್ಲಿ ನೀರು ಸರಬರಾಜಿಗೆ ಸಂಬಂಧಪಟ್ಟ ವೆಚ್ಚಗಳ ಬಗ್ಗೆ ಸಾಮಗ್ರಿ ಖರೀದಿ ಮತ್ತು ಸೇವೆಗಳು ಎಂಬ ಬಾಬತ್ತಿನಂತೆ ಗ್ರಾಮ ಪಂಚಾಯಿತಿಗೆ ರೂ. 2.00 ಲಕ್ಷಗಳ ಮಿತಿಗೆ ಒಳಪಟ್ಟು ವಿನಾಯಿತಿ ನೀಡಿದ ಬಗ್ಗೆ ಗಮನಹರಿಸಿರುವುದಿಲ್ಲ ಅಂತ ಹೇಳಿರುತ್ತಾರೆ. 13ನೇ ಹಣಕಾಸು ಯೋಜನೆಯಲ್ಲಿ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯ ಠರಾವಿನಲ್ಲಿ ಅನುಮೋದಿಸಿದಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಮೇಲಾಧಿಕಾರಿಗಳಿಂದ ಅನುಮೋದನೆ ಪಡೆದು, ಇದೇ ಯೋಜನೆಯ ಮಾರ್ಗಸೂಚಿಯಂತೆ ಅನುದಾನವನ್ನು ಕಾರ್ಯಕ್ರಮಗಳ ಅನುಷ್ಠಾನ ಮೇರೆಗೆ ಸರಬರಾಜುದಾರರಿಗೂ ಹಾಗೂ ಸೇವಾದಾರರಿಗೆ ಅವರಿಂದ ಪಡೆದ ಬಿಲ್ಲುಗಳು ಹಾಗೂ ವೋಚರ್ ಮೇರೆಗೆ ಅನುಮೋದನೆ ಪಡೆದು, ಅನುದಾನವನ್ನು ಬ್ಯಾಂಕ್ ಮೂಲಕ ವರ್ಗಾವಣೆ ಹಾಗೂ ಚೆಕ್‌ಗಳ ಮೂಲಕ ವಿತರಿಸಲಾಗಿದೆ. ತಾನು ಕೇವಲ 4 ತಿಂಗಳು ಮಾತ್ರ ಕರ್ತವ್ಯ ನಿರ್ವಹಿಸಿದ್ದು, ಹಿಂದಿನ ಪಿ.ಡಿ.ಓ. ರವರು ಅನುಮೋದಿಸಿರುವ ಸರಬರಾಜು ಬಿಲ್ಲುಗಳಿಗೆ ನಿಯಮಾನುಸಾರ ಚೆಕ್‌ಗಳ ಮೂಲಕ ಪಾವತಿ ಮಾಡಿರುತ್ತೇನೆ ಅಂತ ಹೇಳಿರುತ್ತಾರೆ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

9. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.-1 ಎಂದು ಸಾಕ್ಷ್ಯ ಮಾಡಿಸಿದ್ದು, ದಾಖಲೆಗಳನ್ನು ನಿ.ಪಿ.1 ರಿಂದ 6ನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ.

ರವರು ತಮ್ಮನ್ನು ಡಿ.ಡಬ್ಲ್ಯೂ.-1 ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1 ದಾಖಲಾತಿಯನ್ನು ಗುರುತುಪಡಿಸಿಕೊಂಡಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

11. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1 ಮತ್ತು 2 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–3:** ಆದೇಶವೇನು?

12. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

14. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ. ರವರು ಪಿ.ಡಿ.ಓ. ಆಗಿ ಹೆಬ್ಬುಣಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 13ನೇ ಹಣಕಾಸು ಯೋಜನೆಯಲ್ಲಿ 20–04–2013 ರಿಂದ 01–11–2016 ಗ್ರಾಮ ಪಂಚಾಯಿತಿಗೆ ಬಂದಿರುವ ಹಣವನ್ನು, ಖರ್ಚು ಮಾಡಿರುವ ವೋಚರ್‌ಗಳನ್ನು

ಕ್ರಿಯಾ ಯೋಜನೆ, ನಗದು ಪುಸ್ತಕ, ಬ್ಯಾಂಕ್ ಪಾಸ್ ಬುಕ್ಕಿನ ಪ್ರತಿ ಕೇಳಿದ್ದು, ಆದರೆ ಕೇವಲ ಬ್ಯಾಂಕ್ ಪಾಸ್ ಬುಕ್ ಪ್ರತಿ ಕೊಟ್ಟಿದ್ದು, ಉಳಿದ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಬ್ಯಾಂಕ್ ಪಾಸ್ ಬುಕ್ಕನ್ನು ಪರಿಶೀಲಿಸಿದಾಗ, 49,30,973/- ರೂ. ಗಳು ಜಮಾ ಆಗಿದ್ದು, ಹಣ ಪೂರ್ತಿ ಖರ್ಚು ಆಗಿತ್ತು. ಹಣ ಖರ್ಚಾದ ಬಗ್ಗೆ ವೋಚರ್‌ಗಳನ್ನು ಸಲ್ಲಿಸದ ಕಾರಣ, ಈ ಸಂಸ್ಥೆಗೆ ದಿನಾಂಕ 17-11-2017ರಂದು ದೂರನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.-1 ಎಂದು, ಫಾರಂ ನಂ.1 ಮತ್ತು ನಿ.ಪಿ.2 ಮತ್ತು ಫಾರಂ ನಂ.2 ನಿ.ಪಿ.-3, ಬ್ಯಾಂಕ್ ಸ್ಟೇಟಮೆಂಟ್ ನಿ.ಪಿ.-4 ಎಂದು ಗುರುತಿಸಿಕೊಂಡಿರುತ್ತಾರೆ.

15. ಮುಂದುವರಿದು ಆ.ಸ.ನೌ. ರು ಸಲ್ಲಿಸಿದ ಆಕ್ಷೇಪಣೆ ಜೊತೆಗೆ ದಾಖಲಾತಿಗಳನ್ನು ಸಲ್ಲಿಸಿದ್ದು, ಅದಕ್ಕೆ ಪ್ರತ್ಯುತ್ತರ ನೀಡಲು ಕೇಳಿಕೊಂಡಿದ್ದು, ಆ ಪ್ರಕಾರ ನಿ.ಪಿ.-5 ರಂತೆ ಪ್ರತ್ಯುತ್ತರ ನೀಡಿದ್ದು, ವೋಚರ್‌ನಲ್ಲಿ ಕಂಡುಬಂದ ನ್ಯೂನತೆಗಳನ್ನು ಅಂದರೆ ವೋಚರ್‌ಗಳಲ್ಲಿ ಸಂಖ್ಯೆಗಳನ್ನು ನಮೂದಿಸಿರುವುದಿಲ್, ದಿನಾಂಕಗಳನ್ನು ನಮೂದಿಸಿರುವುದಿಲ್ಲ. ಅಲ್ಲದೇ ಕೆಲವೊಂದು ವೋಚರ್‌ಗಳಲ್ಲಿ ದಿನಾಂಕಗಳನ್ನು ತಿದ್ದಿರುತ್ತಾರೆ, ವೋಚರ್‌ಗಳಲ್ಲಿ ಯಾವ ಅಧಿಕಾರಿಗಳಿಗೆ ಹಣ ನೀಡಲಾಗಿದೆ ಎಂದು ನಮೂದು ಇರುವುದಿಲ್ಲ. ಹಾಗೂ ಯಾವ ಗ್ರಾಮ ಪಂಚಾಯಿತಿಗೆ ನೀಡಿದ ವೋಚರ್‌ಗಳು ಇರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ವೋಚರ್‌ಗಳನ್ನು ನಿ.ಪಿ.-6 ಎಂದು ಗುರುತಿಸಿಕೊಂಡಿರುತ್ತಾರೆ. ಕೆ.ಟಿ.ಪಿ.ಪಿ. ನಿಯಮಗಳ ಪ್ರಕಾರ ಕೊಟೇಷನ್‌ಗಳನ್ನು ಪಡೆದಿರುವುದಿಲ್ಲ ಅಂತ ನುಡಿದಿರುತ್ತಾರೆ.

16. ಆ.ಸ.ನೌ-1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಸಾಕ್ಷಿಯ ರೂಪದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯವನ್ನು ಹೇಳಿರುತ್ತಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೆಬ್ಬುಣಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು ಇವರು ನೀಡಿದ ದೃಢೀಕರಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿ.ಡಿ.1 ಎಂದು ಗುರುತುಪಡಿಸಿಕೊಂಡಿರುತ್ತಾರೆ.

17. ದೂರುದಾರರು ಹೇಳಿದ ಸಾಕ್ಷಿ ಮತ್ತು ದಾಖಲಾತಿಗಳನ್ನು ಹಾಗೂ ಎದುರುದಾರರು ಹೇಳಿದ ಸಾಕ್ಷಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಸ್ಟೇಟ್‌ಮೆಂಟ್ ಆಫ್ ಅಕೌಂಟನ್ನು ಪ್ರಗತಿ ಕೃಷ್ಣಾ ಗ್ರಾಮೀನ ಬ್ಯಾಂಕ್, ಹೆಬ್ಬುಣಿ ಇವರು ನೀಡಿದ್ದು, ಅದನ್ನು 01-04-2013 ರಿಂದ

13-11-2017ರ ಅವಧಿ ಇದ್ದು, ಇದು ಹೆಬ್ಬುಣಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ್ದು, ವಿಳಾಸದಲ್ಲಿ 13ನೇ ಹಣಕಾಸು ಹೆಬ್ಬುಣಿ ಅಂತ ನಮೂದು ಇದ್ದು, ದಿನಾಂಕ 01-04-2013 ರಂದು ಆರಂಭದ ಶಿಲ್ಕು 7,79,960/- ಇರುತ್ತದೆ. ದಿನಾಂಕ 01-11-2017 ರಂದು ಕೊನೆಯ ಶಿಲ್ಕು 578/- ರೂ. ಇರುತ್ತದೆ. ಏಪ್ರಿಲ್ 2013 ರಿಂದ ಅಕ್ಟೋಬರ್ 2017 ರವರೆಗೆ ಒಟ್ಟು ರೂ.33,20,857/- ಗಳು ಜಮಾ ಆಗಿರುತ್ತದೆ.

18. ವೋಚರ್‌ಗಳನ್ನು ನಿ.ಪಿ.6 ರಂತೆ ಗುರುತಿಸಲಾಗಿದ್ದು, ಅದರಲ್ಲಿ ಪುಟ ನಂ. 53 ರಿಂದ ಪುಟ ನಂ. 136 ರವರೆಗೆ ಗುರುತಿಸಲಾಗಿದ್ದು, ಅವುಗಳ ಮೇಲೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಹೆಬ್ಬುಣಿ ರವರ ಸಹಿ ಇದ್ದು, ಅದರಲ್ಲಿ ಆ.ಸ.ನೌ. ರ ಸಹಿ ಇರುವುದಿಲ್ಲ. ನಗದು ವಹಿಯ ಪ್ರಕಾರ ಜನವರಿ 2013 ರಿಂದ ಅಕ್ಟೋಬರ್ 2014 ರ ಅವಧಿಯಲ್ಲಿ ಹೆಬ್ಬುಣಿ ಗ್ರಾಮ ಪಂಚಾಯಿತಿಯಲ್ಲಿ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಖರ್ಚು ಮಾಡಲಾಗಿದೆ ಎಂದು ಹೇಳಲಾದ ಒಟ್ಟು ಮೊತ್ತ 28,80,000/- ರೂ. ಎಂದು ಕಂಡುಬರುತ್ತದೆ. ಅನುಬಂಧ-2 ರಲ್ಲಿ ತೋರಿಸಿದ ಹಾಗೆ ಕ್ರಮ ಸಂಖ್ಯೆ 25 ರೂ.1,42,183/- ಚೆಕ್ ನಂ. 679558 ದಿನಾಂಕ 18-06-2013, ಕ್ರಮ ಸಂಖ್ಯೆ 80, ರೂ.1,37,975/- ಚೆಕ್ ನಂ. 679345 ದಿನಾಂಕ 20-02-2014, ಕ್ರಮ ಸಂಖ್ಯೆ ನಂ. 90, ರೂ. 1,88,000/- ಚೆಕ್ ನಂ. 4710 ದಿನಾಂಕ 21-03-2014, ಕ್ರಮ ಸಂಖ್ಯೆ ನಂ. 140, ರೂ. 1,01,000/- ಚೆಕ್ ನಂ. 0065 ದಿನಾಂಕ 17-07-2014, ಕ್ರಮ ಸಂಖ್ಯೆ 148, ರೂ.106744/- ಚೆಕ್ ನಂ. 0065 ದಿನಾಂಕ 06-08-2014 ಇವುಗಳು ಒಂದು ಲಕ್ಷ ಮೀರಿದ್ದು, ಸದರಿ ಖರ್ಚಿನ ಹಣಕ್ಕೆ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಟೆಂಡರ್ ಕರೆಯದೇ ಒಟ್ಟು ಹಣ ರೂ.6,75,902/- ಗಳು ದುರುಪಯೋಗ ಆಗಿರುತ್ತದೆ ಅಂತ ವಾದ ಇರುತ್ತದೆ. ಅದರಂತೆ ಕ್ರ.ಸಂ. 56 ರಿಂದ 79 ರವರೆಗೆ ರೂ. 2,91,874/-, ಕ್ರ.ಸಂ. 81 ರಿಂದ 89 1,25,852/-, ಕ್ರ.ಸಂ. 91 ರಿಂದ 139, 141 ರಿಂದ 147 ಹಾಗೂ 149 ರಿಂದ 178 ಒಟ್ಟೂ ಮೊತ್ತ 4,25,967/- ಗಳು ದುರುಪಯೋಗ ವಾಗಿರುತ್ತದೆ ಅಂತಾ ವಾದ ಇರುತ್ತದೆ. ಆದರೆ ಮಂಡನಾಧಿಕಾರಿಗಳು ಶಿಸ್ತು ಪ್ರಾಧೀಕಾರದ ಪರವಾಗಿ ನಗದು ವಹಿಯನ್ನು ಹಾಜರುಪಡಿಸಿರುವುದಿಲ್ಲ ಹಾಗು ಗುರುತಿಸಿಕೊಂಡಿರುವುದಿಲ್ಲ.

19. ಅ.ಸಾ.ನೌ. ರವರು ತಾನು ಆ ಅವಧಿಯಲ್ಲಿ ಕಾರ್ಯದರ್ಶಿ ಗ್ರೇಡ್–1 ಅಂತಾ ಕರ್ತವ್ಯ ನಿರ್ವಹಿಸಿದ್ದು, ಶ್ರೀ ಕೆ.ಸಿ. ಬಾಲಾಜಿಯವರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದರು ಅಂತಾ ಹೇಳಿರುತ್ತಾರೆ. ಈ ಬಗ್ಗೆ ಅ.ಸಾ.ನೌ. ರವರು ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜಿ.ಎಂ. ಚೌಹ್ವಾಣ, ಇವರು ದಿ: 10.08.2022 ರಂದು ನೀಡಿದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದು ನಿ.ಡಿ–1 ಎಂದು ಗುರುತಿಸಲಾಗಿದೆ. ಈ ದಾಖಲಾತಿಗಳ ಪ್ರಕಾರ 2012–13 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಪ್ರಕಾರ ದಿ: 31.12.2015 ರಂತೆ ಅ.ಸಾ,ನೌ ರವರು ದಿ: 01.04.2012 ರಿಂದ 31.03.2013 ರವರೆಗೆ ಹಾಗೂ 2012–2013 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ದಿ: 09.11.2015 ರಂತೆ ಅ.ಸಾ,ನೌ ರವರು ದಿ: 01.04.2013 ರಿಂದ 31.03.2014 ರವರೆಗೆ ಕರ್ತವ್ಯ ನಿರ್ವಹಿಸಿದ್ದರು ಅಂತಾ ಹೇಳಿರುತ್ತಾರೆ. ಅದರಂತೆ ದಿ: 01.04.2012 ರಿಂದ ದಿ: 31.03.2013 ಹಾಗೂ 01.04.2013 ರಿಂದ 31.03.2014 ರವರೆಗೆ ಶ್ರೀ ಕೆ.ಸಿ. ಬಾಲಾಜಿ ರವರು ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿದ್ದಾರೆ ಅಂತಾ ಹೇಳಿರುತ್ತಾರೆ. ಮುಂದುವರೆದು 2014 ರಿಂದ 2016 ಸಾಲಿನ ಲೆಕ್ಕ ಪರಿಶೋಧನಾ ವರದಿ ದಿ: 28.09.2017 ರಂತೆ ಅ.ಸಾ,ನೌ ರವರು ದಿ: 01.04.2015 ರಿಂದ 31.03.2016 ರವರೆಗೆ ಕಾರ್ಯದರ್ಶಿಯಾಗಿ ಕರ್ತವ್ಯನಿರ್ವಹಿಸಿದ್ದು, ಆ ಅವಧಿಯಲ್ಲಿ ಶ್ರೀ ಕೆ.ಸಿ. ಬಾಲಾಜಿ ರವರು ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿದ್ದಾರೆ ಅಂತಾ ಹೇಳಿರುತ್ತಾರೆ. ಮುಂದುವರಿದು, 13 ನೇ ಹಣಕಾಸು ಯೋಜನೆಗೆ ಸಂಬಂಧಪಟ್ಟಂತೆ ದಿ: 20.04.2013 ರಿಂದ 01.11.2016 ರವರೆಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿ ಇರುವುದಿಲ್ಲವೆಂದು ಹೇಳಿರುತ್ತಾರೆ. ಈ ದಾಖಲೆಯ ಬಗ್ಗೆ ಮಂಡನಾಧಿಕಾರಿಗಳು ಅಲ್ಲಗಳೆದಿರುವುದಿಲ್ಲ.

20. ಅನಬಂಧ–2 ರಲ್ಲಿ ಕೇವಲ ಚೆಕ್‌ಗಳು ನೀಡಿರುತ್ತಾರೆ ಅಂತಾ ಹೇಳಿದ್ದು, ಆದರೆ ಸದರಿ ಚೆಕ್‌ಗಳು ಯಾವ ಕಾಮಗಾರಿಗೆ ಸಂಬಂಧಪಟ್ಟಿರುತ್ತವೆ, ಯಾರು ಚೆಕ್‌ಗಳನ್ನು ನೀಡಿರುತ್ತಾರೆ, ಯಾರಿಗೆ ನೀಡಿರುತ್ತಾರೆ ಮತ್ತು ಈ ಕಾಮಗಾರಿ ಸಂಪೂರ್ಣವಾಗಿ ಯಾರ ಅವಧಿಯಲ್ಲಿ ಆಗಿರುತ್ತದೆ ಎನ್ನುವ ಬಗ್ಗೆ ಶಿಸ್ತು ಪ್ರಾಧೀಕಾರದ ಪರವಾಗಿ ಮಂಡನಾಧಿಕಾರಿಗಳು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನಿ.ಡಿ–1 ರ ಪ್ರಕಾರ ಶ್ರೀ ಕೆ.ಸಿ. ಬಾಲಾಜಿ ರವರು ಪಿ.ಡಿ.ಓ. ಆಗಿ

ಕರ್ತವ್ಯನಿರ್ವಹಿಸಿರುತ್ತಾರೆ ಮತ್ತು ವೋಚರ್‌ಗಳ ಮೇಲೆ (ನಿ,ಪಿ–6) ಅ.ಸಾ.ನೌ. ರವರ ಸಹಿ ಇರುವುದಿಲ್ಲ ಬೇರೊಬ್ಬ ಪಿ.ಡಿ.ಓ. ಮತ್ತು ಅಧ್ಯಕ್ಷರ ಸಹಿಗಳು ಇರುತ್ತವೆ. ಆದ್ದರಿಂದ ಈ ಹಣವನ್ನು ಅ.ಸಾ.ನೌ. ರವರೇ ದುರುಪಯೋಗಪಡಿಸಿಕೊಂಡಿರುತ್ತಾರೆ ಎನ್ನುವ ಬಗ್ಗೆ ನಿಖರವಾದ ದಾಖಲೆಗಳನ್ನು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಹಾಜರುಪಡಿಸಿರುವುದಿಲ್ಲ.

21. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

22. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಎಸ್.ಎಂ. ರಂಗಪ್ಪ, ಕಾರ್ಯದರ್ಶಿ, ಹೆಬ್ಬುಣಿ ಗ್ರಾಮ ಪಂಚಾಯಿತಿ, ಮುಳಬಾಗಿಲ ತಾಲೂಕು, ಕೋಲಾರ ಜಿಲ್ಲೆ,** ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/05/2018 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

30/12/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | | Particulars of Documents | |
|---|---|---|---|
| 1 | **Witness examined on behalf of the Disciplinary Authority** | | |
| | **PW.1** | V.Ramkrshnappa, S/o Late Anjaneyalu, Udavarpalli, Cheluru Hobli, Bagepalli Tq, District. Chikkaballapur. (Original) | 65-68 |
| 2 | **Documents marked on behalf of the Disciplinary Authority Ex.P-1 to Ex.P-06** | | Page No. |
| | **Ex,P1, P1(a)** | Complainant and Signature of the complainant. (Original) | 69 |
| | **Ex.P2, P2(a)** | Form No. 1 and Signature of the complainant. (Original) | 70-71 |
| | **Ex.P3, P3(a)** | Form No. 2 and Signature of the complainant. (Original) | 72 |
| | **Ex.P4,** | Bank Statement of Account (Xerox) | 73-86 |
| | **Ex.P5, P5(a)** | Rejoinder filed by the Complainant and his Signature (Original) | 87-105 |
| | **Ex.P6,** | Vouchers (Xerox) | 106-189 |
| 3 | **Witness examined on behalf of the DGO, Documents marked on behalf of the DGO** | | |
| | **DW.1** | S.M. Rangappa S/o, S. Munishamappa, | 190-199 |

| | | | |
|---|---|---|---|
| | | Post Gudupalli, Tq. Mulabagilu, Dist. Kolar. (Original) | |
| 4 | **Documents marked on behalf of the DGO** | | |
| | **Ex D.1** | Certified letter issued by the PDO Hebbuni Gram Panchayat. | 200-201 |

Receipt of the above report and original records may kindly be acknowledged.

Sd/- 30/12/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.